**ಸಾಕ್ಷಿಯನ್ನು ದಿಃ 22.11.2018 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 7 ರಿಂದ 12 ನೇ ಪ್ರತಿವಾದಿ ಪರ ಶ್ರೀ ಸಿ.ಎ.ಜಿ ವಕೀಲರಿಂದಃ**

ನನ್ನ ತಂದೆ ಅವರ ತಂದೆಗೆ ಹಿರಿಮಗ. 8 ನೇ ಪ್ರತಿವಾದಿ 2 ನೇ ಮಗ. 4 ನೇ ಪ್ರತಿವಾದಿ, 7 ನೇ ಪ್ರತಿವಾದಿ 3 ನೇ ಮಗ. ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ಅವರು ಚಿಕ್ಕವರಿದ್ದಾಗಲೇ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆಯಾಗಿ ಎಷ್ಟು ವರ್ಷ ಆಗಿದೆ ಎಂದರೆ ಗೊತ್ತಿಲ್ಲ. ದಾವೆ ಹಾಕುವಾಗ ನನಗೆ 50 ವರ್ಷ ಎಂದು ಹೇಳಿ ಬರೆಸಿದ್ದೆ. ದಾವಾ ಸರ್ವೇ ನಂ. 13, 18 ಮತ್ತು 24 ಎಂದು ಮಾತ್ರ ಗೊತ್ತಿದೆ. ದಾವಾ ಹಾಕುವಾಗ ಸದರಿ ಸರ್ವೇ ನಂಬರ್ ಭಾಗ ಆಗಿ ಪೋಡ್ ಆಗಿತ್ತು ಎಂದರೆ ಗೊತ್ತಿಲ್ಲ. ಕರೀಗೌಡರು 8 ನೇ ಪ್ರತಿವಾದಿ ತನ್ನ ಭಾಗಕ್ಕೆ ಬಂದ ಆಸ್ತಿಯನ್ನು ಅನುಭವಿಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಸರ್ವೇ ನಂಬರನಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದರೆ ಗೊತ್ತಿಲ್ಲ. ದಾವೆಯಲ್ಲಿ ಯಾವ ಯಾವ ಸರ್ವೇ ನಂಬರ್ ಇದೆ ಎಂದರೆ ಗೊತ್ತಿಲ್ಲ. ನನಗೆ ಎಲ್ಲ ಪ್ರತಿವಾದಿಗಳು ಯಾರು ಎಂದು ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ತೀರಿಕೊಂಡರು. ನನ್ನ ತಂದೆ ಮತ್ತು ತಾಯಿ ತೀರಿಕೊಂಡಾಗ ನನಗೆ ಗೊತ್ತಿಲ್ಲ. ನಾನು ಆಗ ಚಿಕ್ಕವಳು. ನನ್ನ ಚಿಕ್ಕಪ್ಪಂದಿರು ಮತ್ತು ನನ್ನ ಅಕ್ಕಂದಿರು ನನ್ನ ಮದುವೆ ದೇವಸ್ಥಾನದಲ್ಲಿ ಮಾಡಿದ್ದರು. ನಾವೆಲ್ಲ ಚಿಕ್ಕವರಿದ್ದಾಗ ನಮ್ಮ ಚಿಕ್ಕಪ್ಪನವರು ಮದುವೆ ಮಾಡಿಕೊಟ್ಟಿದ್ದರು. ದಾವಾ ಆಸ್ತಿ 1, ಸರ್ವೇ ನಂ. 27/3 ರಲ್ಲಿ 1 ಎಕರೆ 3 ಗುಂಟೆ, ಮತ್ತು ದಾವಾ ಆಸ್ತಿ 6, 8 ನೇ ಪ್ರತಿವಾದಿಯ ಭಾಗಕ್ಕೆ ಹೋಗಿದೆ ಎಂದರೆ ಗೊತ್ತಿಲ್ಲ. ಸರ್ವೇ ನಂ. 25 ರಲ್ಲಿ ಮೂಡಾದವರು ಭೂ ಸ್ವಾಧೀನ ಪಡಿಸಿ ಲೇ ಔಟ್ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಈಗ ದಾವಾ ಆಸ್ತಿಗಳು ಯಾರ ಹೆಸರಿನಲ್ಲಿ ಇದೆ ಎಂದು ದಾಖಲೆ ಹಾಜರು ಮಾಡಿದ್ದೇನೆ ಎಂದರೆ ಗೊತ್ತಿಲ್ಲ. ಮೇಲ್ಕಂಡ ದಜಮೀನಿನ ಬಗ್ಗೆ ಪ್ರತಿವಾದಿ 7 ರಿಂದ

12 ಏನು ಪರಿಹಾರ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ. 8 ನೇ ಪ್ರತಿವಾದಿ ತಂದೆ ತೀರಿಕೊಂಡು 25 ವರ್ಷವಾಗಿರಬಹುದು. ಪ್ರತಿವಾದಿ 8 ತಂದಗೆ ನಾಲ್ಕು ಗಂಡು ಮತ್ತು ಮೂರು ಹೆಣ್ಣು ಮಕ್ಕಳಿದ್ದು ಅವರೆಲ್ಲರಿಗೂ ಮದುವೆಯಾಗಿದೆ. ಪ್ರತಿವಾದಿ 7 ಮತ್ತು 8 ಅಣ್ಣತಮ್ಮಂದಿರು ಪ್ರತ್ಯೇಕ ವಾಸವಿದ್ದು ಬೇರೆ ಬೇರೆ ಇದ್ದಾರೆ. ಅವರ ಮಧ್ಯೆ ಪಾಲುಪಟ್ಟಿಯಾಗಿದೆ ಎಂದರೆ ಗೊತ್ತಿಲ್ಲ. ಸರ್ವೇ ನಂ. 13/1 ರಲ್ಲಿ ಪ್ರತಿವಾದಿ 7 ನೇ ಹೆಸರಿಗೆ ಬಂದಿದ್ದು ಅವರೇ ಉಳುಮೆ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿ 9 ಸ್ವಾಮೀಗೌಡನ ಹೆಸರಿಗೆ ಸರ್ವೇ ನಂ. 13/1 20 ಗುಂಟೆ ಮತ್ತು ಸರ್ವೇ ನಂ. 13/2 ರಲ್ಲಿ 1 ಎಕರೆ 1 ಗುಂಟೆ ಇದ್ದು. 8 ನೇ ಪ್ರತಿವಾದಿ ಸರ್ವೇ ನನ. 13/1 ರಲ್ಲಿ 1 ಎಕರೆ 1 ಗುಂಟೆ ಬಂದಿದೆ ಎಂದರೆ ಗೊತ್ತಿಲ್ಲ. ನನಗೆ ಸಹಿ ಮಾಡಲು ಬರುವುದಿಲ್ಲ. ಸರ್ವೇ ನಂ. 25/1 ರಲ್ಲಿ ನಮ್ಮ ಕುಟುಂಬಕ್ಕೆ ಸೇರಿತ್ತು. ಅದರಲ್ಲಿ 28 ಗುಂಟೆ 8 ನೇ ಪ್ರತಿವಾದಿ ಇದ್ದಾರೆ ಎಂದರೆ ಗೊತ್ತಿಲ್ಲ. ನಾವು ದಿಃ 31.01.1998 ರಲ್ಲಿ ಸರ್ವೇ ನಂ. 25/1 ರಲ್ಲಿ 28 ಗುಂಟೆಯನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಆ ಬಗ್ಗೆ ಎಲ್ಲಾ ರೆವಿನ್ಯೂ ದಾಖಲೆ 8 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ. ಸರ್ವೇ ನಂ. 24/1, 25/1 ಮತ್ತು 4 ತೊಟ್ಟಿ ಮನೆ 5 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ನಮ್ಮ ತಾಯಿ ಆಸ್ತಿಯನ್ನು ನಾವು ಅಕ್ಕತಂಗಿಯರು ಭಾಗ ಮಾಡಿಕೊಂಡಿರುತ್ತೇವೆ. ಅದರಲ್ಲಿ ನಮ್ಮ ಹಿರಿ ಅಕ್ಕನಿಗೆ 24/1 30 ಗುಂಟೆ ಮತ್ತು 1/4 ಭಾಗ ದಾವಾ ಆಸ್ತಿಯಲ್ಲಿ ಅವರಿಗೆ ಬಂದಿತ್ತು. ಅವರು 1964 ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯಿಂದ ಸರ್ವೇ ನಂ. 23/1 ರಲ್ಲಿ 30 ಗುಂಟೆಯನ್ನು ಬೇರೆಯವರಿಗೆ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ ತನ್ನ ಪಾಲಿನ ಮನೆಯನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. 3 ನೇ ಪ್ರತಿವಾದಿ ಭಾಗಕ್ಕೆ ಯಾಂದಳ್ಳಿಯ ಸರ್ವೇ ನಂ. 27/1 ರಲ್ಲಿ 17 ಗುಂಟೆ, 24/1 ರಲ್ಲಿ 12 ಗುಂಟೆ ಮತ್ತು 1 ಅಂಕಣ ಮನೆ ಬಂದಿರುತ್ತದೆ ಎಂದರೆ ನಿಜ. ನನ್ನ ಭಾಗಕ್ಕೆ ಬಂದಿದ್ದನ್ನು ನಾನು ಅನುಭವಿಸುತ್ತಿದ್ದೇನೆ. ನನ್ನ ತಂದೆಗೆ ಸರ್ವೇ ನಂ. 18/1 ರಲ್ಲಿ 2 ಎಕರೆ 16 ಗುಂಟೆ, ಸರ್ವೇ ನಂ.

17/1 ರಲ್ಲಿ 13 ಗುಂಟೆ ಮತ್ತು ದಾವಾ ಆಸ್ತಿಯ 5 ನೇ ಮನೆ ಬಂದಿತ್ತು ಎಂದರೆ ನಿಜ. ಸರ್ವೇ ನಂ. 18/1 ರಲ್ಲಿ ದಾವಾ ಆಸ್ತಿ 2 ಮೈಸೂರು ನಗರದವರು ಖರೀದಿ ಮಾಡಿ ಸ್ವಾಧೀನದಲ್ಲಿರುತ್ತಾರೆ. ನಾನು ನನ್ನ ಭಾಗದ ಮನೆಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 7 ರಿಂದ 9 2005 ರಲ್ಲಿ ತನ್ನ ಪಾಲಿನ ಆಸ್ತಿಗಳನ್ನು ಖಾತೆ ಮಾಡಲು ತಹಶೀಲ್ದಾರ್ ರವರಿಗೆ ಕೊಟ್ಟಿದ್ದರು. ಅದನ್ನು ತಕರಾರು ಕೊಟ್ಟಿದ್ದೆ. ನಂತರ ನಾನು ಒಪ್ಪಿಗೆ ಕೊಟ್ಟಿದ್ದೆ. ಆ ನಂತರ ಆ ಪ್ರಕಾರ ಖಾತೆ ಮಾಡಿದ್ದರು ಎಂದರೆ ಗೊತ್ತಿಲ್ಲ. ದಿಃ 16.09.2005 ರಲ್ಲಿ ನಾವೆಲ್ಲ ಅಕ್ಕತಂಗಿಯರು ಈ ಬಗ್ಗೆ ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದೆ ಎಂದರೆ ಗೊತ್ತಿಲ್ಲ. ನಮ್ಮ ಗ್ರಾಮದ ಸೋಸೇಗೌಡ ಗೊತ್ತು. ಇನ್ನೊಬ್ಬ ಶಿವನಂಜಪ್ಪ ತೀರಿಕೊಂಡಿರುತ್ತಾರೆ. ಅವರು ಗ್ರಾಮದ ಮುಖಂಡರು ಆಗಿದ್ದರು. ನಾವೆಲ್ಲ ಅಕ್ಕಂತಂಗಿಯರು ಅನ್ಯೂನ್ಯವಾಗಿಲ್ಲ. ಅವರ ಮಾತು ಕೇಳಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅಕ್ಕತಂಗಿಯರು ಅವರ ಭಾಗಕ್ಕೆ ಬಂದಂತಹ ಆಸ್ತಿಗಳನ್ನು ನನಗೆ ಕಾಣದ ಹಾಗೆ ಮಾರಾಟ ಮಾಡಿಕೊಂಡಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ,**

ಸಹಿ/-

**ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಸಿವಿಲ್**
**ನ್ಯಾಯಾಧೀಶರು (ಹಿ.ವಿ.), ಮೈಸೂರು**